ಮಧುಕರಿಯೆಂಬ ನನ್ನ ಗಂಡಮಹಾಶಯ, ಚಪ್ಪಲಿಯೆಣಿಸಿದ್ದನ್ನೇ ಮೆಲುಕುತ್ತ, ನಕ್ಕುಕೊಂಡು ಪಡಸಾಲೆಯೊಳಕ್ಕೆ ಹೋದರೆ, ಅಲ್ಲಿ ನೆರೆದ ಐವತ್ತೂ ಸಮಸ್ತ ಮಂದಿಯ ನಡುವೆ, ಅಲೇಕ್ಸ್ಯ ಬ್ರಹ್ಮ ಕಾಣಸಿಗದೆ, ಪೇಚಾಡಿದ್ದಾಯಿತು. ಅಲ್ಲೊಂದು ಬಗೆಯ ಅಪರಿಚಿತ ಸಡಗರ ಮೈವೆತ್ತುಕೊಂಡಿತ್ತು. ಸಾಲದುದಕ್ಕೆ, ಅಲ್ಲಿದ್ದವರಲ್ಲಿ ಒಬ್ಬಿಬ್ಬರಾದರೂ ಗುರುತಿನವರು ಬೇಡವೆ?! ಊಹ್ಞೂಂ... ಪರಿಚಯದ ಚಹರೆಯೇ ಕಾಣಿಸಲಿಲ್ಲ. ಮಧುಕರಿಯಂತೂ ನಿಂತಲ್ಲೇ 'ಥಾಥೈಯ ಥಕಥೈಯ' ಮಾಡತೊಡಗಿದ. ಅವನೊಳಗಿನ ಅವಾಂತರವು ಥಧಿಗಿಣತೋಂ ಅಂದಿದ್ದು ಸಶಬ್ದ ಕೇಳತೊಡಗಿತು. ಮತ್ತೆ ಮತ್ತೆ, ಕಣ್ಣಿದರಿಕೆಯಲ್ಲೇ ಇರು ಇರು ಅಂತಂದು ಸಂಭಾಳಿಸುವುದಾಯಿತು. ಇನ್ನು, ಪಡಸಾಲೆಯಲ್ಲಿದ್ದ ಸಂದಣಿಯನ್ನು ನೋಡಿದರೆ ವಿಚಿತ್ರವೆನ್ನಿಸಿತು. ಅಲ್ಲಿದ್ದ ಮಂದಿಯಲ್ಲಿ ಮುಕ್ಕಾಲುಪಾಲು ಹರೆಯದವರೇ ಆಗಿದ್ದರು! ಹರೆಯವೆಂದರೆ ತೀರಾ ಹದಿಹರೆಯದವರಲ್ಲದಿದ್ದರೂ, ಅದನ್ನು ಈಚೆಗಷ್ಟೇ ಅಂದರೆ ಬರೇ ಐದಾರು ವರ್ಷಗಳ ಹಿಂದಕ್ಕೆ ದಾಟಿದವರು... ಥರಾವರಿ ಸ್ಟೈಲುಗಳನ್ನು ಮೈಭರ್ತಿ ಬಿಂಕಿಸಿಕೊಂಡಿದ್ದರು. ಗಂಡಸರು ಇತ್ತಿತ್ತಲಾಗಿನ ರೂಢಿಯಂತೆ ಮೋರೆಭರ್ತಿ ತೀರಾ ನುಣ್ಣಗೆ ಹೆರೆಯದ ಗಡ್ಡವಿಟ್ಟುಕೊಂಡು, ತಲೆಗೂದಲನ್ನು ಬುರುಡೆ ಕಾಣುವ ಮಟ್ಟಕ್ಕೂ – ಸುತ್ತಲೂ ಕೆತ್ತಿಸಿಕೊಂಡು, ಗಂಡುನವಿಲಿನ ಶಿಖೆಯನ್ನು ಹೋಲುವ ಹಾಗೆ, ಮಂಡೆಯಲ್ಲಿ ಪೊದೆಮುಡಿಯುಳಿಸಿಕೊಂಡು ಬೀಗುತ್ತಿದ್ದರು. ಅವರ ತೋಳುಗಳಲ್ಲಿ ಮುಂಗೈ – ಮೊಣಕೈವರೆಗೆ ಹಾವಿನ ಹಾಗೆ ಹರಿದು ಹಬ್ಬುವ ಹಚ್ಚೆ. ಕೆಲವು ಕಿವಿಗಳಲ್ಲಿ ನಕ್ಷತ್ರದ ಕಿಡಿ ಕಾಣಿಸುವ ಮುರ. ಇನ್ನು, ಹೆಣ್ಣುಗಳ ಅವತಾರವನ್ನು ಆಡುವುದೇ ಬೇಡ. ಮೈಯಿರುವುದೇ ತೋರಲಿಕ್ಕೆನ್ನುವ ಹಾಗೆ, ತೋರಬಹುದಾದಲ್ಲೆಲ್ಲ ತೆರೆದುಕೊಂಡು – ಚಿನ್ನಾರಿ ಹಚ್ಚಿದ ಮಿಣಿಮಿಣಿ ಮಿಣುಕುಡುಗೆ ತೊಟ್ಟು ಸಂಭ್ರಮಿಸುತ್ತಿದ್ದವು. ಒಬ್ಬೊಬ್ಬರದೂ ಬಿಚ್ಚುಹೆರಳು; ಬೋಳುಹಣೆ. ಹಣೆ ತುಂಬಿದವರಲ್ಲಿ, ತಿಲಕವೆನಿಸದ ಹಾಗಿನ್ನೇನೋ ಚಿತ್ತಾರ! ಕೆಲವರ ಬೆನ್ನಲ್ಲೆಲ್ಲ ರಂಗೋಲಿಯಂತಹ ಹಬ್ಬುಹಚ್ಚೆ!! ಇವರನ್ನೆಲ್ಲ ನೋಡಿ ನನಗೂ ಕಸಿವಿಸಿಯಾಯಿತು. ಅಕಸ್ಮಾತ್ ಬೇರೆಲ್ಲಾದರೂ ಬಂದುಬಿಟ್ಟೆವೆ... ಅನ್ನಿಸುವಾಗ, ಅಲೇಕ್ಸ್ಯನ ಮನೆಯೇ ಅನ್ನಲಿಕ್ಕೆ ಜ್ಯಾಕಲಿನ್ ನಮ್ಮನ್ನು ಗುರುತಿಸಿದಳಷ್ಟೆ... ಎಂದು ನನ್ನನಗೇ ಖಾತ್ರಿ ಪಟ್ಟಿದ್ದಾಯಿತು. ಆದರೂ ನಮ್ಮನ್ನು ಹೀಗೆ ಕರೆದು ಕರೆಯಿಸಿಕೊಂಡ ಮಹಾಶಯನಾದರೂ ಎಲ್ಲಿ? ಎಲ್ಲಿ ಕಣ್ಮರೆಯಾಗಿದ್ದಾನೆ? ಕರೆದ ಮೇಲೆ, ಸ್ವಾಗತಿಸಲಿಕ್ಕೆ ಮುಂಗದದಲ್ಲಿಯೇ ಇರುವುದಲ್ಲವೆ... ಅಂದುಕೊಂಡೆ. ಮಧುಕರಿ, 'ಇದಕ್ಕೇ ಹೇಳಿದ್ದು... ಕಂಡು ಗೊತ್ತಿರದ ಜಾಗ. ಬರೋದು ಬೇಡ ಅಂತ...' ಎಂದು ಹೇಳಿದ. 'ನೀನೇ ಕೇಳಲಿಲ್ಲ... ಅನುಭವಿಸು!!' ಅಂತಲೂ ಅನ್ನದೆಯೇ ಅಂದುಬಿಟ್ಟ. ಅಲ್ಲಿದ್ದ ಹುಡುಹುಡುಗು ಪಡ್ಡೆ ಪಡೆಯ ನಡುವೆ, ನಾವಿಬ್ಬರೂ ಕುರುಕ್ಷೇತ್ರದೊಳಗಿನ ಭೀಷ್ಮಾಚಾರ್ಯನ ಓರಗೆಯವರೆನಿಸಿರಲಿಕ್ಕೆ ಸಾಕು! ಒಬ್ಬರಾದರೂ ಹರಾಶಿವಾ ಅನ್ನಬೇಡವೆ? ಹಾಯ್‌ಹೆಲೋ ಆಡಬೇಡವೆ? ಮನಸ್ಸು ಸುಖಾಸುಮ್ಮನೆ ಕುದಿಯತೊಡಗಿತು. 'ಬರೇ ಹತ್ತಿರದವರ ಕೂಟ ಅಂದಿದ್ದ ಆಸಾಮಿ! ಇಲ್ಲಿ ನೋಡಿದರೆ ಹುಡುಹುಡುಗು ಮಂದಿ ಇದ್ದಾರೆ...' ಮಧುಕರಿ ಮತ್ತೆ ನೆನಪಿಸಿದ. 'ಏನೋ ಸ್ಪೆಷಲ್ ಅಕೇಶನ್ ಇರಬೇಕು... ನಾವು ನೋಡಿದರೆ ಹೀಗೆ ಕ್ಯಾಷುಅಲ್ ಆಗಿ ಬಂದಿದೀವಿ. ಡೆಫಿನಿಟ್ಲೀ, ವಿಶೇಷ ಸಂದರ್ಭ ಅನಿಸುತ್ತೆ...' ಅಂತಲೂ, ನಮ್ಮಿಬ್ಬರ ವೇಷಭೂಷವನ್ನು ಅಲ್ಲಿದ್ದ ಮಂದಿಗೆ ಹೋಲಿಸಿ ಒಗ್ಗರಿಸಿದ.

ಅಷ್ಟರಲ್ಲಿ, ಮುಮ್ಮನೆಯಲ್ಲಿದ್ದ ಜ್ಯಾಕಲಿನ್ ನಮ್ಮನ್ನು ಹುಡುಕಿಕೊಂಡು ಬಂದಳು. 'ಸರ್